ಓ. ಎಸ್. ನಂಃ 625/2018 ಪಿ.ಡಬ್ಲ್ಯೂ- 1

ದಿನಾಂಕಃ 24.08.2023 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

## ಮುಖ್ಯ ವಿಚಾರಣೆಃ ವಾದಿಯ ಪರ ಶ್ರೀ. ಬಿ.ಸಿ.ಡಿ.ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿಯ ಪರ ಸಾಕ್ಷಿಯಾಗಿದ್ದು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಶಪಥ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನನ್ನ ಹೇಳಿಕೆಯ ಮೇರೆಗೆ ತಯಾರಿಸಿದ್ದಾರೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿದೆ, ಇದರಲ್ಲಿ ಇರುವ ಸಹಿ ನನ್ನದು.

ದಿನಾಂಕ 22.09.2015 ರ ಕ್ರಯದ ಕರಾರು ಪತ್ರವನ್ನು ನಿಪಿ 1 ಎಂದು, ಮತ್ತು ಅದರಲ್ಲಿರುವ ವಾದಿ, ಪ್ರತಿವಾದಿ, ಸಾಕ್ಷಿಗಳ ಹಾಗೂ ಪತ್ರಬರಹಗಾರರ ಸಹಿಯನ್ನು ಸಾಲಾಗಿ ನಿಪಿ 1 ಎ ಯಿಂದ ನಿಪಿ 1 ಎಫ್ ಎಂದು, ಈ ಖಾತಾ ಪ್ರತಿಯನು ನಿಪಿ 2 ಎಂದು, ದಿನಾಂಕ 04.011.2016 ರಂದು ನೀಡಿದ ವಕೀಲರ ನೊಟಿಸ್ ಅನ್ನು ನಿಪಿ 3 ಎಂದು, ತೆರೆದ ನ್ಯಾಯಾಲಯದಲ್ಲಿ ವಾಪಾಸ್ಸಾದ ಅಂಚೆ ಲಕೋಟೆಗಳನ್ನು ತೆರೆದು ನೋಡಲಾಗಿ ನೋಟಿಸ್ ಅನ್ನು ಸಾಲಾಗಿ ನಿಪಿ 4 ರಿಂದ ನಿಪಿ 6 ಎಂದು, ಅಂಚೆ ಲಕೋಟೆಗಳನ್ನು ನಿಪಿ 4 ಎ, ನಿಪಿ 5 ಎ ಹಾಗೂ ನಿಪಿ 6 ಎ ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ